ಕಾಸರಗೋಡಿನ ಮೊಗಸಾಲೆ ಎಂಬಲ್ಲಿ ಹುಟ್ಟಿದ ಡಾ.ನಾರಾಯಣ ಮೊಗಸಾಲೆ ಅವರು ಹಿರಿಯ ಕಥೆಗಾರ. ವೈದ್ಯಕೀಯ ಸೇವೆಯು ಹಳ್ಳಿಗಳಿಗೆ ತಲುಪಬೇಕು ಎಂಬ ನಿಟ್ಟಿನಲ್ಲಿ ಕಾಂತಾವರ ಎಂಬಲ್ಲಿ ನೆಲೆಸಿ ವೃತ್ತಿ ಆರಂಭಿಸಿದರು. ಅವರ ಸಾಹಿತ್ಯ ಪ್ರೀತಿಯ ದೆಸೆಯಿಂದ ಅಲ್ಲಿ ಕಾಂತಾವರ ಕನ್ನಡ ಸಂಘವನ್ನು ಕಟ್ಟಿದರು. ಕಥೆ, ಕಾದಂಬರಿ, ಲೇಖನ ಸಂಗ್ರಹ, ಕವನ ಸಂಕಲನಗಳು ಸೇರಿದಂತೆ ಅವರು ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿಯೂ ಕೃಷಿ ಮಾಡಿದವರು. ಪ್ರಕಾಶನ ಕೆಲಸಗಳನ್ನೂ ನಿರ್ವಹಿಸಿದ್ದಾರೆ. ಈ ಸಾಧನೆಯ ಹಾದಿಯಲ್ಲಿ ಅವರಿಗೆ ಪ್ರಶಸ್ತಿ– ಪುರಸ್ಕಾರಗಳು ಸಂದಿವೆ.

ಮಾತನಾಡುವ ಸ್ಥಿತಿಯಲ್ಲಿರಲಿಲ್ಲ. ಆತ ನಿಧಾನವಾಗಿ ಚೇತರಿಸಿಕೊಂಡು 'ಹೌದು, ಸ್ವಾಮಿ, ನಾನೂ ಈ ದಿನ ದೇವಸ್ಥಾನಕ್ಕೆ ಹೋಗಬೇಕಿತ್ತು. ಆದರೆ ನಮ್ಮ ಮನೆಯ ಹಿಂದೆ ಇರುವ ಕರಿಬೇವಿನ ಮರದ ಮೇಲೆ ಕುಳಿತು ಅಲ್ಲಿಂದ ಮಂಗಗಳು ತೋಟಕ್ಕೆ ಹಾರಿ ಕೊಡುವ ಉಪದ್ರವ ಹೇಳುವಂಥದ್ದಲ್ಲ. ಆ ಕರಿಬೇವಿನ ಮರದ ಕೊಂಬೆಗಳನ್ನು ಕತ್ತರಿಸಿ ಯಾವುದಾದರೂ ತೆಂಗಿನ ಮರದ ಬುಡಕ್ಕೆ ಹಾಕಿ ಎಂದು ನನ್ನ ಹೆಂಡತಿ ಹೇಳುತ್ತಲೇ ಬಂದಿದ್ದರೂ, 'ನಾನು ನಾಳೆ ನೋಡೋಣ, ನಾಳೆ ನೋಡೋಣ' ಎನ್ನುತ್ತಾ ಅದನ್ನು ಮುಂದೆ ಹಾಕಿದ್ದೆ. ನಿನ್ನೆ ಅವಳು ತುಸು ಅಸಮಾಧಾನದಲ್ಲಿ 'ನೀವು ಆ ಕೊಂಬೆಗಳನ್ನು ತುಂಡರಿಸದಿದ್ದರೆ, ನಾನೇ ಮರ ಹತ್ತ ಬೇಕಾಗುತ್ತದೆ' ಎಂದು ನನ್ನನ್ನು ಹೆದರಿಸಿದಾಗ, 'ಆಯ್ತು' ಎಂದು ಈ ದಿನ ಆ ಕೆಲಸ ಮಾಡಿ ಪೇಟೆಗೆ ಹೊರಟೆ. ಹೆಂಡತಿಯನ್ನು ದೇವಸ್ಥಾನಕ್ಕೆ ಕಳುಹಿಸಿದೆ' ಎಂದ.

ಕುಪ್ಪಣ್ಣಯ್ಯನವರಿಗೆ ಕಾರ್ಕಳ ಪೇಟೆಯಲ್ಲಿ ಕರಿಬೇವಿನ ಸೊಪ್ಪಿಗೆ 'ಸಿಕ್ಕಾಪಟ್ಟೆ ಡಿಮಾಂಡ್' ಇದೆ ಎಂದು ಗೊತ್ತಿತ್ತು. ಬಹುತೇಕ ಹೋಟೆಲುಗಳಲ್ಲಿನ ಸಾಂಬಾರಿಗೆ ಅದು ಬೇಕೇ ಬೇಕಿತ್ತು. ಇನ್ನು ಕಡ್ಲೆ ಬೇಳೆಯ ಚಟ್ನಂಬಡೆಗೆ, ಉದ್ದಿನ ವಡೆಗೆ ನಾಲ್ಕು ಕರಿಬೇವಿನ ಸೊಪ್ಪನ್ನು ಚಿಕ್ಕಚಿಕ್ಕದಾಗಿ ಕತ್ತರಿಸಿ ಹಾಕಿದರೆ ಅದರ ರುಚಿಯೇ ಬೇರೆ ಎಂದು ಅವರಿಗೆ ಗೊತ್ತಿತ್ತು. ಅವರೂ ತಮ್ಮ ಮನೆಯ ಹಿಂದೆ ಇದಕ್ಕಾಗಿಯೇ ಹದಿನೇಳು ಹದಿನೆಂಟು ವರ್ಷಗಳ ಹಿಂದೆಯೇ ನಾಲ್ಕು ಕರಿಬೇವಿನ ಗಿಡ ನೆಟ್ಟಿದ್ದರು. ಅದು ಈಗ ಎರಡು ಮೂರಾಳಿನಷ್ಟು (ಸುಮಾರು 18 X 20 ಅಡಿಯಷ್ಟು) ಬೆಳೆದಿದ್ದು 'ಗಿಲ ಗಿಲ' ಎಂಬಂತೆ ಸಮೃದ್ಧಿಯಿಂದ ಕುಣಿಯುತ್ತಿತ್ತು. ಚಿಕ್ಕದಿರುವ ಅವರ ಹೋಟೆಲಿಗೆ ಇಡೀ ವರುಷಕ್ಕೆ ಒಂದು ಗಿಡದ ಕರಿಬೇವಿನ ಸೊಪ್ಪು ಸಾಕಾಗುತ್ತಿತ್ತು. ಉಳಿದ ಮೂರು ಗಿಡಗಳ ಕೊಂಬೆ ರೆಂಬೆಗಳಿಗೆ ಅವರು 'ಕತ್ತಿ ಮುಟ್ಟಿಸದೇ' (ಕಡಿಯದೇ) ಇದ್ದುದರಿಂದ ಅವು ಕುಪ್ಪಣ್ಣಯ್ಯನನ್ನು ಕಣ್ತುಂಬಿಕೊಂಡು ನಳನಳಿಸುತ್ತಿದ್ದುವು.

ಕುಪ್ಪಣ್ಣಯ್ಯ ಕುತೂಹಲದಲ್ಲಿ 'ಈ ಒಂದು ಗೋಣಿ ತುಂಬಾ ಕರಿಬೇವಿನ ಸೊಪ್ಪು ಇದೆಯಲ್ಲ? ಇದನ್ನು ಗೊಂಚಲು ಗೊಂಚಲಾಗಿ ಮಾರುತ್ತೀಯಾ? ಅಥವಾ 'ಹೋಲ್‌ಸೇಲ್' ಆಗಿ ಕೊಡುತ್ತೀಯಾ ಹೇಗೆ?' ಎಂದು ಮಾಂಕುವನ್ನು ಪ್ರಶ್ನಿಸಿದರು.

ಮಾಂಕು ಅಷ್ಟರಲ್ಲಿ ಅರ್ಧ ತಂಬಿಗೆ ನೀರು ಕುಡಿದು ಒಂದು ಚಾ ಮತ್ತು ಎರಡು ದೋಸೆಗೆ ಆರ್ಡರ್ ಮಾಡಿದ್ದ. ಅವು ಅವನ ಟೇಬಲಿಗೆ ಬರುತ್ತಿದ್ದಂತೆ ದೋಸೆಯನ್ನು ತುಂಡು ತುಂಡಾಗಿ ಕತ್ತರಿಸಿ ಬಾಯಿಗೆ ಇಡುವುದರ ನಡುವೆ ಆತ 'ನಾನು ಹೋಲ್‌ಸೇಲಾಗಿಯೇ ಇದನ್ನು ಕೊಡುವುದು' ಎಂದವನೇ 'ಅಲ್ಲಿ ಒಬ್ಬ ಸಾಬಿ ಸಂತೆಯ ದಿನ ಬರುತ್ತಾನೆ. ಕುಂಟ ಹುಸೇನಿ ಅಥವಾ ಗಾಡಿ ಹುಸೇನಿ ಎಂದು ಅವನ ಹೆಸರು. ಸುಮಾರು ಇಪ್ಪತ್ತೈದು ವರುಷಗಳ ಹಿಂದೆ, ಈ ನಮ್ಮ ರಥಬೀದಿಯ ರಾಂಭಟ್ಟರು ಇದ್ದಾರಲ್ಲ, ಕಿರಾಣಿ ಅಂಗಡಿಯವರು, ಅವರಿಗೆ ಜಿನಸಿಗಳನ್ನೆಲ್ಲ ತನ್ನ ಗಾಡಿಯಲ್ಲಿ ತಂದು ಕೊಡುತ್ತಿದ್ದವನು ಅವನೇ' ಎಂದು ತಂಬಿಗೆ ಎತ್ತಿ ಮತ್ತೆ ಒಂದು ಗುಟುಕು ನೀರು ಕುಡಿದು 'ಅವನಿಗೆ ನೀವು ಗೊತ್ತು. ಇನ್ನೂ ನಾಲ್ಕಾರು ಮಂದಿ ಗೊತ್ತು. ಕಾರ್ಕಳ ಪೇಟೆಗೆ ನಾನು ಮೊನ್ನೆ ಹೋಗಿದ್ದಾಗ ನಿನಗೆ ಕರಿಬೇವಿನ ಸೊಪ್ಪು ಬೇಕಾ? ಎಂದು ಅವನಲ್ಲಿಗೆ ಹೋಗಿದ್ದೆ. ಅವನಿಗೆ ನಾನು ಸೀತಾಪುರದವನು ಎಂದು ಗೊತ್ತಾದ ಕೂಡಲೇ ನಿಮ್ಮನ್ನೂ ರಾಂಭಟ್ಟರನ್ನೂ ವಿಚಾರಿಸಿದ'